ಪಂಚನಹಳ್ಳಿಗೆ ಪ್ರಥಮ ದರ್ಜೆ ಕಾಲೇಜು ಮಂಜೂರು ಮಾಡುವ ಬಗ್ಗೆ.

೩೩೬. ಶ್ರೀ ಪಿ. ಬಿ. ಓಂಕಾರ ಮೂರ್ತಿ(ಕಡೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಳ ಜಿಲ್ಲೆಗಳ ಕೇಂದ್ರದಲ್ಲಿರುವ ಪಂಚನಹಳ್ಳಿಗೆ ಪ್ರಥಮ ದರ್ಜೆ ಕಾಲೇಜನ್ನು ೧೯೮೬-೮೭ರಲ್ಲಿ ಮಂಜೂರು ಮಾಡುವುದಾಗಿ ಭರವಸೆ ಕೊಟ್ಟಿರುವುದು ನಿಜವೇ ?

ಆ) ಇದರ ಬಗ್ಗೆ ಸಚಿವ ಸಂಪುಟದ ತೀರ್ಮಾನದ ಮೇರೆಗೆ ೧೯೮೯-೯೦ರಲ್ಲಿ ಪ್ರಾರಂಭ ಮಾಡಿರುವುದಾಗಿ ಲಿಖಿತ ಮೂಲಕ ಸರ್ಕಾರದಿಂದ ಆದೇಶ ಕೊಟ್ಟರೂ ನಿಧಾನವಾಗಿರಲು ಕಾರಣ ವೇನು ?

ಇ) ಈ ವರ್ಷವಾದರೂ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ. ಚಂದ್ರಶೇಖರ್(ಶಿಕ್ಷಣ ಮಂತ್ರಿಗಳು).—

ಅ) ನಿಜ.

ಆ) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ ೧೯೭೯ರ ಪ್ರಕರಣ ೫೩(೫)ರಂತೆ ಹೊಸ ಕಾಲೇಜುಗಳಿಗೆ ಸಂಯೋಜನೆ ನೀಡುವ ಅಧಿಕಾರ ವಿಶ್ವವಿದ್ಯಾನಿಲಯಗಳಿಗೆ ಮಾತ್ರವಿದ್ದು ಸರ್ಕಾರಕ್ಕೆ ಸಂಯೋಜನೆ ನೀಡುವಂತೆ ಶಿಫಾರಸ್ಸು ಮಾಡಲು ಅಧಿಕಾರವಿದೆ. ಕಾಲೇಜು ಶಿಕ್ಷಣ ನಿರ್ದೇಶಕರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೆ ಅರ್ಜಿ ಸಲ್ಲಿಸಿರುತ್ತಾರೆ. ವಿಶ್ವವಿದ್ಯಾನಿಲಯದಿಂದ ಅವರ ಅಭಿಪ್ರಾಯದೊಂದಿಗೆ ಪ್ರಸ್ತಾವನೆ ಬಂದ ನಂತರ ಸರ್ಕಾರವು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆಯಂತೆ ಮುಂದಿನ ಕ್ರಮ ತೆಗೆದುಕೊಂಡು ಕಾಲೇಜನ್ನು ೧೯೮೯-೯೦ನೇ ಸಾಲಿನಿಂದ ಪ್ರಾರಂಭಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು

ಇ) ವಿಶ್ವವಿದ್ಯಾನಿಲಯದಿಂದ ಪ್ರಸ್ತಾವನೆ ಬಂದ ನಂತರ ಸೂಕ್ತ ಆದೇಶ ನೀಡಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಅಧ್ಯಾಪಕರ ಸಂಖ್ಯೆ ಬಗ್ಗೆ

೩೭೧. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ(ಕುಂದಾಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಪದವಿಪೂರ್ವ ಕಾಲೇಜುಗಳಲ್ಲಿ ೧೯೮೮-೮೯ರ ಶೈಕ್ಷಣಿಕ ವರ್ಷ ಆರಂಭದಿಂದ ವಿವಿಧ ವಿಷಯಗಳನ್ನು ಬೋಧಿಸುವ ಎಷ್ಟು ಅಧ್ಯಾಪಕರ ಹುದ್ದೆಗಳು ಖಾಲಿ ಇವೆ. (ತಾಲ್ಲೂಕುವಾರು ಹಾಗೂ ವಿಷಯವಾರು ವಿವರಗಳನ್ನೊದಗಿಸುವುದು) :

ಆ) ಈ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಮ್. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ಒಟ್ಟು ೪೬ ಹುದ್ದೆಗಳು ಖಾಲಿ ಇವೆ. ತಾಲ್ಲೂಕುವಾರು ಮತ್ತು ವಿಷಯವಾರು ವಿವರಗಳ ಬಗ್ಗೆ ಪಟ್ಟಿಯನ್ನು ಲಗತ್ತಿಸಿದೆ.

ಆ) ಈ ಹುದ್ದೆಗಳು ಬಡ್ತಿಯಿಂದ ತುಂಬಬೇಕಾದ ಹುದ್ದೆಗಳು ಆಗಿರುವುದರಿಂದ, ಸ್ನಾತಕೊತ್ತರ ಪದವಿ ಪಡೆದ ಸಹ ಶಿಕ್ಷಕರ ಜ್ಯೇಷ್ಠತಾ ಪಟ್ಟಿಯನ್ನು ತಯಾರಿಸಿ ಪ್ರಕಟಿಸಲಾಗುತ್ತಿದೆ. ಅಂತಿಮ ಜ್ಯೇಷ್ಠತಾ ಪಟ್ಟಿಯು ಪ್ರಕಟಣೆಯಾದ ನಂತರ ಈ ಹುದ್ದೆಗಳನ್ನು ಸಹ ಶಿಕ್ಷಕರ ವೃಂದದಿಂದ ತುಂಬಲಾಗುವುದು.

ಅನುಬಂಧ

ದಕ್ಷಿಣ ಕನ್ನಡ ಜಿಲ್ಲೆಯ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರುಗಳ ತಾಲ್ಲೂಕುವಾರು ಹಾಗೂ ವಿಷಯವಾರು ವಿವರ

ತಾಲ್ಲೂಕು	ಅಂಗ್ಲಭಾಷೆ	ವಾಣಿಜ್ಯಶಾಸ್ತ್ರ	ಜೀವಶಾಸ್ತ್ರ	ರಸಾಯನಶಾಸ್ತ್ರ	ಗಣಿತ	ಜೀವಶಾಸ್ತ್ರ	ಭೌತಶಾಸ್ತ್ರ	ಹಿಂದಿ	ಒಟ್ಟು
೧) ಪುತ್ತೂರು	೨	೧	—	—	—	—	—	—	೩
೨) ಬಂಟ್ವಾಳ	೩	೨	—	—	—	—	೨	—	೬
೩) ಸೂಳ್ಯ	೧	೧	—	—	—	—	—	—	೨
೪) ಮಂಗಳೂರು	೨	೫	—	೧	—	೧	೩	—	೧೦
೫) ಕಾರ್ಕಳ	೨	೨	—	—	—	—	೧	—	೫
೬) ಕುಂದಾಪುರ	—	೧	೧	೧	೧	೧	೨	—	೬
೭) ಮುಲ್ಕಿ,	—	—	—	—	—	—	೧	—	೧
೮) ಉಡುಪಿ	೧	೫	—	೧	—	—	೩	೧	೧೧
ಒಟ್ಟು	೧೧	೧೫	೧	೩	೧	೨	೧೨	೧	೪೬

ಶಿಕಾರಿಪುರ ಹಾಗೂ ಶಿರಾಳಕೊಪ್ಪ ಅರಣ್ಯವಲಯದಲ್ಲಿ ಶ್ರೀಗಂಧದ ಕಳ್ಳಸಾಗಾಣಿಕೆ ಬಗ್ಗೆ

೩೧೫ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ(ಕುಂದಾಪುರ).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಕಾರಿಪುರ ಹಾಗೂ ಶಿರಾಳಕೊಪ್ಪ ಅರಣ್ಯ ವಲಯಗಳಲ್ಲಿ ೧೯೮೬ರಿಂದ ೧೯೮೯ ಜನವರಿ ೩೧ರವರೆಗೆ ವರದಿಯಾಗಿರುವ ಶ್ರೀ ಗಂಧದ ಕಳ್ಳಸಾಗಾಣಿಕೆಯ ಪ್ರಕರಣಗಳ ಸಂಖ್ಯೆ ಎಷ್ಟು ?

ಆ) ಈ ಪ್ರಕರಣಗಳಲ್ಲಿ ಶ್ರೀ ಗಂಧದ ಹಾಗೂ ಮುಟ್ಟುಗೋಲು ಹಾಕಿಕೊಂಡ ವಾಹನಗಳ ಅಂದಾಜು ಮೌಲ್ಯವೆಷ್ಟು ? (ಪ್ರಕರಣಗಳ ವರ್ಷವಾರು ವಿವರ ಒದಗಿಸುವುದು)

ಇ) ಈ ಕಳ್ಳಸಾಗಾಣಿಕೆಯನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ(ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು).—

ಅ)

ಶಿಕಾರಿಪುರ ವಲಯ	ಶಿರಾಳಕೊಪ್ಪ ವಲಯ
೧೯೬ ಪ್ರಕರಣಗಳು	೫೨ ಪ್ರಕರಣಗಳು

ಆ) ಶ್ರೀಗಂಧದ ಮೌಲ್ಯ ಮತ್ತು ಮುಟ್ಟುಗೋಲು ಹಾಕಿಕೊಂಡ ವಾಹನಗಳ ಮೌಲ್ಯಗಳ ವರ್ಷವಾರು ವಿವರ ಈ ಕೆಳಗಿನಂತಿದೆ.

(ಶಿಕಾರಿಪುರ ವಲಯ)	(ಶಿರಾಳಕೊಪ್ಪ ವಲಯ)
೧೯೮೬–೮೭	೧೯೮೬–೮೭
ಅಂದಾಜು ಮೌಲ್ಯ	ಅಂದಾಜು ಮೌಲ್ಯ
ರೂ. ೨೭.೮೬,೦೦೦	ರೂ.೫೨,೦೦,೦೦೦
೧೯೮೭–೮೮	೧೯೮೭–೮೮
ರೂ.೨೧.೪೬,೧೨೦	೮,೨೬,೮೦೦
೧೯೮೮–೮೯	೧೯೮೮–೮೯
ರೂ.೫೯೪,೯೪೦	ರೂ. ೧೧,೭೦,೦೦೦